# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಕಾ.ಪಾ.ಅ(ಮ)ಪಿ.ಆರ್/1338/C/13-14

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ,
ಮಲ್ಲೇಶ್ವರಂ ವಿಭಾಗ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.
2ನೇ ಅಡ್ಡರಸ್ತೆ, ಜಲದರ್ಶಿನಿ ಲೇಔಟ್,
ಎಂ.ಎಸ್.ಆರ್. ನಗರ, ಬೆಂಗಳೂರು-54
ದಿನಾಂಕ:16/11/2013

## ಸರಬರಾಜು ಆದೇಶ

ವಿಷಯ: ವಾರ್ಡ್ ಸಂಖ್ಯೆ:45 (ಮಲ್ಲೇಶ್ವರಂ)ರಲ್ಲಿ ಘನತ್ಯಾಜ್ಯ ವಸ್ತು ವಿಲೇವಾರಿ ನಿರ್ವಹಣೆ ಮತ್ತು ವಿಲೇವಾರಿ ಕಾರ್ಯಕ್ಕೆ ಪೌರಕಾರ್ಮಿಕರನ್ನು ಹಾಗೂ ವಾಹನಗಳನ್ನು ಸರಬರಾಜು ಮಾಡುವ ಬಗ್ಗೆ.

ಉಲ್ಲೇಖ:ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತಿಕೆರೆ ಉಪವಿಭಾಗ, ಬೆಂಗಳೂರು ರವರ ಕೋಟೇಷನ್ ಪ್ರಕಟಣೆ ದಿನಾಂಕ:27/09/2013

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಾರ್ಡ್ ಸಂಖ್ಯೆ:45(ಮಲ್ಲೇಶ್ವರಂ)ರಲ್ಲಿ ಇಲಾಖಾವತಿಯಿಂದ ಘನತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿ ನಿರ್ವಹಿಸಲು ಪೌರಕಾರ್ಮಿಕರನ್ನು ಹಾಗೂ ವಾಹನಗಳನ್ನು ಸರಬರಾಜು ಮಾಡಲು ದಿನಾಂಕ:27/09/2013ರಂದು ಕರೆಯಲಾದ ಕೋಟೆಷನ್ ಪ್ರಕಟಣೆಯಲ್ಲಿ ಪ್ರತಿ ಮಾಹೆಗೆ ಮೆ॥ಪ್ರಕೃತಿ ಎಂಟರ್‌ಪ್ರೈಸಸ್ ರವರು ನಮೂದಿಸಿದ ದರ ರೂ.16,48,000/- (ಹದಿನಾರು ಲಕ್ಷದ ನಲವತ್ತೆಂಟು ಸಾವಿರ ರೂಪಾಯಿಗಳು) ಉಳಿದ ದರಗಳಿಗಿಂತ ಕಡಿಮೆಯಿದ್ದು, ಸದರಿ ದರಗಳು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾಗಿರುತ್ತದೆ. ಅದರಂತೆ ದಿನಾಂಕ:01/10/2013ರಿಂದ ಮುಂದಿನ ಆದೇಶದವರೆಗೆ ಕೆಳಕಂಡ ಷರತ್ತುಗಳಿಗೊಳಪಡಿಸಿ ಅಗತ್ಯವಿರುವ ಪೌರಕಾರ್ಮಿಕರನ್ನು ಹಾಗೂ ವಾಹನಗಳನ್ನು ಕೂಡಲೇ ಸರಬರಾಜುಗೊಳಿಸಲು ತಿಳಿಸಿದೆ.

| Sl No | Particulars | Qty | Unit Rate in Rs | Estimated Cost |
|---|---|---|---|---|
| 1 | Auto tippers with driver and helper | 11 | 28511 | 313621.00 |
| 2 | Push Cart with helper | 8 | 9330 | 74640.00 |
| 3 | Compactor with one driver and helper | 1 | 121944 | 121944.00 |
| 4 | Tipper Lorry with driver and 4 helpers | 1 | 93476 | 93476.00 |
| 5 | Pourakarmikas with material including push carts for street sweeping | 72 | 9592 | 690624.00 |
| 6 | Pourakarmikas with material including open area cleaning | 8 | 9330 | 74640.00 |
| 7 | Pushcart with helper for Burial ground And open area. | 7 | 9592 | 67144.00 |
| 8 | Supervisors | 4 | 9885 | 39540.00 |
| 9 | 16% Labour cost for Sunday & Holiday Working | 18 | 9592 | 172656.00 |
| | **Total Estimated Cost in Lakhs** | | | **1648000.00** |

P.T.O.

ಷರತ್ತುಗಳು:

1. ಸರಬರಾಜು ಆದೇಶ ತಲುಪಿದ ಒಂದು ವಾರದೊಳಗಾಗಿ ಕಾರ್ಮಿಕರ ಪರವಾನಗಿ ಮತ್ತು ಇ.ಎಸ್.ಐ. ಮತ್ತು ಪಿ.ಎಫ್ ಹಾಗು ವಾಹನಗಳ ನೊಂದಾಯಿತ ದಾಖಲಾತಿಗಳನ್ನು ಕಛೇರಿಗೆ ಸಲ್ಲಿಸುವುದು ಹಾಗು ಪ್ರತಿ ಮಾಹೆ ಇ.ಎಸ್.ಐ. ಮತ್ತು ಪಿ.ಎಫ್ ಪಾವತಿಸಿ ದಾಖಲಾತಿ ಒದಗಿಸುವುದು
2. ಸರಬರಾಜುಗೊಳಿಸುವ ಪೌರಕಾರ್ಮಿಕರುಗಳ ಜೊತೆಯಲ್ಲಿ ಅಗತ್ಯವಿರುವ ಸಾಮಾಗ್ರಿ ಮತ್ತು ಸಲಕರಣೆಗಳನ್ನು ನೀಡುವುದು
3. ವಾಹನ ಚಾಲಕರು ಬಾರಿ ವಾಹನ ಚಾಲನೆಯ ಪರವಾನಗಿ ಕಡ್ಡಾಯವಾಗಿ ಹೊಂದಿರತಕ್ಕದ್ದು,
4. ನೀವು ಸರಬರಾಜುಗೊಳಿಸಿರುವ ಪೌರಕಾರ್ಮಿಕರುಗಳನ್ನು ಯಾವುದೇ ಕಾರಣಕ್ಕೂ ಬಿ.ಬಿ.ಎಂ.ಪಿ. ನೌಕರರೆಂದು ಪರಿಗಣಿಸತಕ್ಕದ್ದಲ್ಲ.
5. ನೀವು ಸರಬರಾಜುಗೊಳಿಸಿರುವ ವಾಹನಗಳು ಉತ್ತಮ ಸ್ಥಿತಿಯಲ್ಲಿರಬೇಕು ಹಾಗು ಸದರಿ ವಾಹನಗಳ ರಿಪೇರಿ/ದುರಸ್ಥಿಯ ಜವಾಬ್ದಾರಿ ನಿಮ್ಮದೇ ಆಗಿರುತ್ತದೆ.

ಕಾರ್ಯಪಾಲಕ ಅಬಿಯಂತರರು,
ಮಲ್ಲೇಶ್ವರಂ ವಿಭಾಗ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ರವರಿಗೆ,
ಪ್ರಕೃತಿ ಎಂಟರ್‌ಪ್ರೈಸಸ್,
#10, 32ನೇ ಮುಖ್ಯರಸ್ತೆ,
5ನೇ ಅಡ್ಡರಸ್ತೆ, ಡಾಲರ್ಸ್ ಕಾಲೋನಿ,
ಬಿ.ಟಿ.ಎಂ. 1ನೇ ಹಂತ,
ಬೆಂಗಳೂರು-68.

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ. ರವರ ಆಪ್ತ ಕಾರ್ಯಾಲಯಕ್ಕೆ ಮಾಹಿತಿಗಾಗಿ ಸಲ್ಲಿಸಿದೆ
2. ಮಾನ್ಯ ಅಪರ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ
3. ಸಹಾಯಕ ನಿಯಂತ್ರಕರು (ಹಣಕಾಸು), (ಪಶ್ಚಿಮ) ವಲಯ ರವರ ಮಾಹಿತಿ ಹಾಗು ಸೂಕ್ತ ಕ್ರಮಕ್ಕಾಗಿ
4. ಸಹಾಯಕ ಕಾರ್ಯಪಾಲಕ ಅಭಿಯಂತರರು (ಮತ್ತಿಕೆರೆ) ಉಪವಿಭಾಗ ರವರ ಮಾಹಿತಿಗಾಗಿ
5. ಕಛೇರಿ ಕಡತಕ್ಕೆ.